ಸಾಕ್ಷಿ ಯನ್ನು ದಿಃ 07.03.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರಿಂದ**

1. ಮದನ್ ರವರು ಹಾಕಿದ ಪ್ರಕರಣದಲ್ಲಿ ನಿಮಗೆ ಶಿಕ್ಷೆ ಆಗಿತ್ತು ಎಂದರೆ ಸರಿ, ನಂತರದಲ್ಲಿ ರಾಜಿ ಮಾಡಿಕೊಡಿದ್ದೇವೆ, ಸದರಿ ತೀರ್ಪಿನ ದೃಢೀಕೃತ ನಕಲನ್ನು ನಿಪಿ - 25 ಎಂದು ಗುರುತಿಸಲಾಯಿತು. ರಾಜಿ ಆದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ.
2. ಕೊಪ್ಪದಿಲ್ಲರುವ ಸ್ವಸ್ತಿಕ್ ಫೈನಾನ್ಸ್ ನಲ್ಲಿ ಪಿಗ್ಮಿ ಕಲೆಕ್ಟರ್ ಹಾಗೂ ಪಾಲುದಾರ ಆಗಿದ್ದೇನೆ. ಬಿ.ಎಸ್.ಸುರೇಶ ರವರು ಅದರಲ್ಲಿ ಪಾಲುದಾರರಾಗಿದ್ದರು.
3. ಸ್ವಸ್ತಿಕ್ ಫೈನಾನ್ಸ್ ನಲ್ಲಿ ಸಾಲ ಕೊಡಬೇಕಾದರೆ ಪ್ರೋನೋಟ್ ಹಾಗು ಚೆಕ್ ಪಡೆಯುತ್ತೀರಾ ಎಂದರೆ, ಪ್ರೋನೋಟ್ ಮಾತ್ರ ಪಡೆಯುತ್ತೇವೆ ಚೆಕ್ ಪಡೆಯುವುದಿಲ್ಲ.
4. ಸ್ವಸ್ತಿಕ್ ಫೈನಾನ್ಸ್ ನಲ್ಲಿ ಕೊಪ್ಪ ಗ್ರಾಮದ ದೇವರಾಜ ರವರು ಸಾಲ ಪಡೆದು, ಅದೇ ದಿನ ಚೆಕ್ ಹಾಗೂ ಪ್ರೋನೋಟ್ ಕೊಟ್ಟಿದ್ದರು ಎಂದರೆ ಸರಿಯಲ್ಲ, ಪ್ರೋನೋಟ್ ಮಾತ್ರ ಕೊಟಿದ್ದರು, ಚೆಕ್ ಕೊಟ್ಟಿಲ್ಲ.
5. ಸದರಿ ದೇವರಾಜು ರವರಿಂದ ನೀವು ಚೆಕ್ ಪಡೆದು ಸದರಿ ಚೆಕ್ಕನ್ನು ವಾಪಸ್ ಕೊಟ್ಟಿಲ್ಲ ಎಂದು ಸಹಕಾರ ಸಂಘ ಉಪ ನಿಬಂಧಕರಿಗೆ ಅವರು ದೂರು ನೀಡಿದ್ದರು ಎಂದರೆ, ರಾಜಕೀಯ ದ್ವೇಷದಿಂದ ನೀಡಿದ್ದರು ಎಂದು ನುಡಿಯುತ್ತಾರೆ. ಸದರಿ ಆದೇಶದಲ್ಲಿ ಸ್ವಸ್ತಿಕ್ ಫೈನಾನ್ಸ್‌ನವರು ಕಾಯ್ದೆ ವಿರುದ್ಧ ಚೆಕ್ ಪಡೆದು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು 10 ಸಾವಿರ ದಂಡ ವಿಧಿಸಿದ್ದರು ಎಂದರೆ, ಸರಿ, ಆದರೆ ಸದರಿ ಕೇಸ್ ನಲ್ಲಿ ನೀವೇ ವಾದ ಮಾಡಿ ವಜಾ ಮಾಡಿಸಿದ್ದೀರಾ ಎಂದು ನುಡಿಯುತ್ತಾರೆ.

( ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶವನ್ನು ಕೋರಿದ್ದು, ಸಮಯನ್ನು ನೀಡಿ ಮುಂದುಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ